**15 ನವೆಂಬರ್, 2017**

**<u>ವಸಂತ್ ದಾದಾ ನಗರಿ ಸಹಕಾರಿ ಬ್ಯಾಂಕ್ ಲಿಮಿಟೆಡ್ , ಒಸ್ಮಾನಾಬಾದ್ , ಮಹಾರಾಷ್ಟ್ರ – ಇದಕ್ಕೆ ನಿರ್ದೇಶನ</u>**

ಭಾರತೀಯ ರಿಜರ್ವ್ ಬ್ಯಾಂಕ್ ,ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ವಸಂತ್ ದಾದಾ ನಗರಿ ಸಹಕಾರಿ ಬ್ಯಾಂಕ್ ಲಿಮಿಟೆಡ್ , ಒಸ್ಮಾನಾಬಾದ್ , ಮಹಾರಾಷ್ಟ್ರ - ಇದಕ್ಕೆ 13 ನವೆಂಬರ್ 2017 ರ ವ್ಯವಹಾರ ಸಮಯ ಮುಕ್ತಾಯದ ನಂತರ ಜಾರಿಗೆ ಬರುವಂತೆ, ಠೇವಣಿ ತೆಗೆದುಕೊಳ್ಳುವ/ ಖಾತೆದಾರರು ಹಣ ಹಿಂಪಡೆಯುವ ಗರಿಷ್ಠ ಮೊತ್ತದ ಕುರಿತು ಕೆಲವು ನಿರ್ದೇಶನಗಳನ್ನು ನೀಡಿದೆ.

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 35A ರ ಉಪ ಕಲಂ (1) ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಈ ಮಾರ್ಗದರ್ಶನಗಳನ್ನು ವಿಧಿಸಿದೆ. ನಿರ್ದೇಶನದ ಒಂದು ಪ್ರತಿಯನ್ನು ಬ್ಯಾಂಕ್ ಆವರಣದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ. ಮೇಲೆ ಸೂಚಿಸಿದ ಬ್ಯಾಂಕು ಇನ್ನು ಮುಂದೆ ಸಾಮಾನ್ಯ ಬ್ಯಾಂಕಿಂಗ್ ವ್ಯವಹಾರವನ್ನು ಕೈಗೊಳ್ಳಲಿದೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಆದ ಮಾರ್ಗದರ್ಶನಗಳ ನೀಡಿಕೆ ಬ್ಯಾಂಕಿಂಗ್ ಪರವಾನಗಿ ರದ್ದು ಎಂದು ಅರ್ಥೈಸಿಕೊಳ್ಳಬಾರದು . ಬ್ಯಾಂಕ್ ತನ್ನ ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆ ಆಗುವ ತನಕ ನಿರ್ಬಂಧಗಳೊಂದಿಗೆಬ್ಯಾಂಕಿಂಗ್ ವ್ಯವಹಾರ ಮಾಡುತ್ತದೆ. ಸಂದರ್ಭಗಳನ್ನು ಅವಲಂಬಿಸಿ ರಿಸರ್ವ್ ಬ್ಯಾಂಕ್ ಈ ಮಾರ್ಗದರ್ಶನಗಳ ಬದಲಾವಣೆಗಳನ್ನು ಪರಿಗಣಿಸಬಹುದು.

**ಅಜಿತ್ ಪ್ರಸಾದ್**

ಸಹಾಯಕ ಸಲಹೆಗಾರರು

**ಪತ್ರಿಕಾ ಪ್ರಕಟಣೆ : 2017-2018/1347**